ಶ್ರೀ ಬಿ. ಎಚ್. ಬೋರಣ್ಣಗೌಡ.—49 ಟೋಲ್ ಗೇಟುಗಳಲ್ಲಿ ಈಗ ಮನ್ನಾ ಮಾಡಿರತಕ್ಕ ಟೋಲ್ ಗೇಟುಗಳೆಷ್ಟು?

* Sri A. G. RAMACHANDRA RAO.—Except five bridge toll-gates, Government have decided to abolish the other toll-gates.

ಶ್ರೀ ಬಿ. ಎಚ್. ಬೋರಣ್ಣಗೌಡ.—ಈ ಐದು ಬ್ರಿಡ್ಜ್ ಟೋಲುಗೇಟುಗಳನ್ನೂ ಯಾವಾಗ ಅಬಾಲಿಷ್ ಮಾಡುತ್ತೀರಿ?

ಶ್ರೀ ಎ. ಜಿ. ರಾಮಚಂದ್ರರಾವ್.—ಬ್ರಿಡ್ಜ್ ಟೋಲ್ ಗೇಟುಗಳನ್ನು ಒಂದು priniciple ಮೇರೆ ಮಾಡಿದ್ದಾರೆ. ಅದಕ್ಕೆ ಖರ್ಚು ಆಗಿರುವ ಹಣವೆಲ್ಲ ವಸೂಲಾದ ತಕ್ಷಣ automatic ಆಗಿ ಹೋಗುತ್ತದೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಬ್ರಿಡ್ಜ್ ಟೋಲ್ ಗೇಟುಗಳನ್ನು ಹಾಕುವಾಗ ವಸೂಲ್ಮಾಡಬೇಕೆಂದು ವಿಧಾಯಕವಾಗಿರುವ ಫೀಯನ್ನು ಮತ್ತೆ ಮತ್ತೆ ಹೆಚ್ಚು ಮಾಡುತ್ತಿರುವುದಕ್ಕೆ ಕಾರಣವೇನು?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು Motor Transport Regulations ಪ್ರಕಾರ ಬದಲಾವಣೆ ಯಾಗುತ್ತದೆ.

ಶ್ರೀ ಡಿ. ಆರ್. ಕರಿಗೌಡ.—ಗೊರೂರು ಬಳಿ ಇರುವ ಸೇತುವೆಯ ಟೋಲ್‌ಗೇಟು ಎಷ್ಟು ವರ್ಷಗಳ ಕಾಲ ಇರಬೇಕೆಂದು estimate ಆಗಿತ್ತು?

ಶ್ರೀ ಎ. ಜಿ. ರಾಮಚಂದ್ರರಾವ್.—ಇಷ್ಟು ವರ್ಷಗಳ ಕಾಲವೆಂದು ಎಸ್ಟಿಮೇಟ್ ಮಾಡಿಲ್ಲ. I have no estimate.

ಶ್ರೀ ಡಿ. ಆರ್. ಕರಿಗೌಡ.—ಇದನ್ನು ಪ್ರಾರಂಭ ಮಾಡಿದಾಗ 20 ವರ್ಷಗಳ ಕಾಲ ಟೋಲ್ ವಸೂಲ್ಮಾಡಿದರೆ ಹುಟ್ಟುವಳಿಯಾಗುತ್ತದೆ ಎಂದು ಅಂದಾಜು ಮಾಡಿದ್ದುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ನುಮಾರು 20 ವರ್ಷಗಳ ಕಾಲವಾಗಬೇಕು ಎಂದು ನಿರೀಕ್ಷೆನ ರಾಗಿತ್ತು.

ಶ್ರೀ ಡಿ ಆರ್. ಕರಿಗೌಡ.—ಈಗಲಾದರೂ ಅದನ್ನು ತೆಗೆದು ಹಾಕುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಒಂದು ತತ್ವವನ್ನನುಸರಿಸಿ ಮಾಡುತ್ತಿದ್ದೇವೆ. ಆ ಸೇತುವೆಗೆ ಖರ್ಚಾದ ಹಣ ವಸೂಲಾದ ತಕ್ಷಣ ವಜಾಮಾಡುತ್ತೇವೆ.

ಶ್ರೀ ಡಿ. ಆರ್. ಕರಿಗೌಡ.—ಇದಕ್ಕೆ ವರ್ಷಕ್ಕೆ ಆಗುವ ಖರ್ಚೆಷ್ಟು?

ಶ್ರೀ ಎ. ಜಿ. ರಾಮಚಂದ್ರರಾವ್.—ಗೊರೂರು ಸೇತುವೆಗೆ ಸಂಬಂಧಪಟ್ಟದ್ದು 1-4-1955 ರಿಂದ 31-1-1956ರ ವರೆಗೆ 10 ತಿಂಗಳ ರೆಕ್ಕವಿದೆ. ಅದರಲ್ಲಿ ವರಮಾನ ರೂಪಾಯಿ 3,198-6-0 ಮತ್ತು ಖರ್ಚು ರೂಪಾಯಿ 1,417-14-0.

Mysore City State Transport Service.

Q.—52. Sri B. NARAYANASWAMY (Mysore City South).—

Will the Government be pleased to state :—

(*a*) the income and expenditure of Mysore City State Transport Service from October 1952 up-to-date (month-war figures may kindly be furnished);

(*b*) the number of new employees taken to serve, subsequent to October 1955 ;

(*c*) whether any committee has been appointed to advise on matters of change of route and time-table ?

Sri A. G. RAMACHANDRA RAO (Minister for Law and Education) [on behalf of Sri H. SIDDAVEERAPPA (Minister for Home)].—

	October 1955	*November 1955*
	Rs.	Rs.
(*a*) Income	41,553	31,235
Expenditure	27,054	27,630

	December 1955	*January 1956*
Income ...	27,988	29,920
Expenditure	26,292	26,354

(*b*) Four in November 1955 and twelve in January 1956.

(*c*) No.

Sri B. NARAYANASWAMY.—I have no supplementaries.

"Giri Express".

Q.—85. Sri T. G. THIMMEGOWDA (Tiptur).—

Will the Government be pleased to state :—

(*a*) the number of passengers carried and fare earned by the "Giri Express" since the inception of the service ;

(*b*) whether it has come to their notice that there is sufficient traffic for another service to be run in the route ;

(*c*) whether they introduce a service between Shimoga and Bangalore *via* Arsikere to lessen the pressure of traffic in the "Giri Express"?

*Asterisk indicates that the remarks or speeches have not been revised by the Member concerned.

A.—Sri A. G. RAMACHANDRA RAO (Minister for Law and Education) [on behalf of SRI H. SIDDAVEERAPPA (Minister for Home)].—

(*a*) Passengers: 4,737 during January 1956.

Total fare earned: Rs. 10,814-10-0.

(*b*) No.

(*c*) This will be examined.

ಶ್ರೀ ಟಿ. ಜಿ. ತಿಮ್ಮೇಗೌಡ.—(b) ಭಾಗಕ್ಕೆ ಉತ್ತರವಾಗಿ 'ಇಲ್ಲ' ಎಂದು ಹೇಳಿದೆ. ಇದನ್ನು examine ಮಾಡಲಾಗಿದೆಯೇ?

*ಶ್ರೀ ಎ. ಜಿ. ರಾಮಚಂದ್ರರಾವ್.—Examine ಮಾಡಿದೆ. ಆದರೆ 'ಗಿರಿ ಎಕ್ಸ್‌ಪ್ರೆಸ್' ನಡೆಯುತ್ತಾ ಇರುವುದರಿಂದ ಇನ್ನೂ ಒಂದು additional service ಹಾಕುವುದಕ್ಕೆ ಅವಕಾಶವಿಲ್ಲವೆಂದು ಹೇಳಲಾಗಿದೆ.

ಶ್ರೀ ಟಿ. ಜಿ. ತಿಮ್ಮೇಗೌಡ.—'Giri Express' ಬಸ್ಸಿನ capacity ಎಷ್ಟು?

ಶ್ರೀ ಎ. ಜಿ. ರಾಮಚಂದ್ರರಾವ್.—ನಲವತ್ತು. The capacity of the bus is 40 seats.

ಶ್ರೀ ಟಿ. ಜಿ. ತಿಮ್ಮೇಗೌಡ.—ಒಂದು ತಿಂಗಳಿನಲ್ಲಿ 4,737 ಜನ ಪ್ರಯಾಣ ಮಾಡುತ್ತಾರೆಂದು ತಿಳಿಸಿಲ್ಪಟ್ಟಿದೆ. ದಿನ ಒಂದಕ್ಕೆ ಎಷ್ಟು ಜನ ಪ್ರಯಾಣ ಮಾಡುತ್ತಾರೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಸ್ಸಿನ capacity 40 ಎಂದರೆ ಹೋಗಿಬರುತ್ತ 80 ಜನರು ಪ್ರಯಾಣ ಮಾಡುತ್ತಾರೆ ಎಂದು ತಿಳಿಯಬಹುದು.

ಶ್ರೀ ಟಿ. ಜಿ. ತಿಮ್ಮೇಗೌಡ.—ಉತ್ತರದಲ್ಲಿ ಕೊಟ್ಟಿರುವ ಪ್ರಕಾರ 150 ಜನರಾಗುತ್ತಾರೆ. ತಾವು ಪರಿಶೀಲನೆ ಮಾಡುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದರಲ್ಲಿ short distance passengers ಇರುತ್ತಾರೆ. ಅದೆಲ್ಲ ಸೇರಿದೆ.

ಶ್ರೀ ಟಿ. ಜಿ. ತಿಮ್ಮೇಗೌಡ.—ಬಸ್ಸಿನಲ್ಲಿ 40 ಸೀಟುಗಳು ಮಾತ್ರವಿದ್ದು, ತಮ್ಮ ಉತ್ತರದ ಪ್ರಕಾರ 75 ಜನ ಪ್ರಯಾಣ ಮಾಡಿದರೆ overload ಆಗುವುದಿಲ್ಲವೆ?

Sri A. G. RAMACHANDRA RAO.—I believe, Sir, that the short-distance passengers are also taken into account and the total number is given.

ಶ್ರೀ ಟಿ. ಜಿ. ತಿಮ್ಮೇಗೌಡ.—ಈ ದೃಷ್ಟಿಯಿಂದ ಪ್ರಯಾಣಿಕರ ಸಂಖ್ಯೆ ಜಾಸ್ತಿ ಇದೆ ಎಂದು ಒಪ್ಪಿಕೊಳ್ಳುತ್ತಿರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಪ್ರಯಾಣಿಕರ ಸಂಖ್ಯೆ ಜಾಸ್ತಿ ಇದೆ.

ಶ್ರೀ ಟಿ. ಜಿ. ತಿಮ್ಮೇಗೌಡ.—ಇನ್ನೊಂದು ಬಸ್ಸು ನಡೆಸುವುದಕ್ಕೆ ಅವಕಾಶ ಕೊಡುತ್ತೀರಾ?

Sri A. G. RAMACHANDRA RAO.—We will consider.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—"ಗಿರಿ ಎಕ್ಸ್‌ಪ್ರೆಸ್" ಬಸ್ಸಿಗೆ ಒಂದು ತಿಂಗಳಿನಲ್ಲಿ 10,814 ರೂಪಾಯಿ 10 ಆಣಿಗಳು ವರಮಾನ ಎಂದು ಕೊಡಲಾಗಿದೆ. ಇದು ಖರ್ಚು ಕಳೆದು ಬಂದಿರುವುದೇ ಅಥವಾ ಖರ್ಚು ಸೇರಿಕೊಂಡಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ಹಣ ಟಿಕೆಟ್ಟುಗಳಿಂದ ಬಂದುದಾಗಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈ ಬಸ್ ಸರ್ವಿಸ್ ಇದ್ದಮೇಲೆ ಬಹಳ ದೂರ ಹೋಗತಕ್ಕ ಪ್ರಯಾಣಿಕರಿಗೆ ಸೀಟುಗಳು ಸಿಕ್ಕುವುದಿಲ್ಲ ಮತ್ತು ಬಹಳ overload ಹಾಕುತ್ತಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈ ಬಸ್ ಸರ್ವಿಸ್ಸಿಗೆ ಒಂದು ದಿವಸಕ್ಕೆ ಸುಮಾರು 400 ರೂಪಾಯಿಗಳ ವರಮಾನ ಇದ್ದರೆ ಪ್ರಯಾಣಿಕರು ಆ ಮಾರ್ಗದಲ್ಲಿ ಹೆಚ್ಚಾಗಿದ್ದಾರೆಂದು ತಿಳಿಯುತ್ತದೆ. ಈ ಮಾರ್ಗದಲ್ಲಿ ಇನ್ನೂ ಒಂದು ಬಸ್ ಹಾಕುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಹಿಂದೆ ಒಂದು ಸಲ ಮಾನ್ಯ ಮಂತ್ರಿಗಳು ಎಲ್ಲಾ ಜಿಲ್ಲಾ ಮುಖ್ಯ ಪಟ್ಟಣಗಳಿಗೂ ಸರ್ಕಾರಿ ಬಸ್ ಸರ್ವಿಸ್ ಹಾಕುತ್ತೇವೆಂದು ಹೇಳುತ್ತಿದ್ದರು. ಶಿವಮೊಗ್ಗಾಕ್ಕೆ ಕೂಡಲೇ ಒಂದು ಬಸ್ ಸರ್ವಿಸ್ ಹಾಕುತ್ತೀರಾ?

Sri A. G. RAMACHANDRA RAO.—We had a very ambitious plan for the Second Five-Year Period. But it has been cut. Even so, we will try whether we can reach Shimoga.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ರೈಲಿನಲ್ಲಿ ಪ್ರಯಾಣ ಮಾಡಬೇಕಾದರೆ ಕಾಲಕ್ಕೆ ಸರಿಯಾಗಿ ಬರುವುದಕ್ಕೆ ಆಗುವುದಿಲ್ಲವಾದುದರಿಂದ ಎಲ್ಲ District Headquarterಗಳಿಗೂ ಬೆಂಗಳೂರಿನಿಂದ Express Service ಬಸ್ಸುಗಳನ್ನು ಸಾಧ್ಯವಾದಷ್ಟು ಜಾಗ್ರತೆಯಾಗಿ ಹಾಕುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಸ್ಸುಗಳ ಅವಶ್ಯಕತೆ ಗೊತ್ತಾಗಿದೆ. ನಾವು ಎಲ್ಲ District Headquarterಗಳಿಗೂ ಬಸ್ಸು ಸೌಕರ್ಯವನ್ನು ಕಲ್ಪಿಸಬೇಕೆಂದು ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದ್ದೆವು. ಅದನ್ನು cut ಮಾಡಿದ್ದಾರೆ. ಶಿವಮೊಗ್ಗಕ್ಕೆ ಒಂದು ಬಸ್ ಹಾಕುವ ವಿಷಯವನ್ನು ಪರಿಶೀಲನೆ ಮಾಡುತ್ತೇವೆ.

Passenger Transport (Nationalisation).

Q.—120. Sri D. R. KARI GOWDA (Hassan).—

Will the Government be pleased to state:—

(*a*) what is the policy of Government adopted in nationalising passenger transport in the State;

(*b*) whether there is any definite programme of nationalisation of all the routes within three years?